ಅತ್ಯಂತ ಕಡಿಮೆ ದರದಲ್ಲಿ ಅತ್ಯುತ್ತಮ ಸೌಕರ್ಯವುಳ್ಳ ಛತ್ರ ದೊರೆಯುತ್ತದೆ.
ವಿದ್ಯಾರಣ್ಯ ಕನ್ವೆನ್ಷನ್ ಹಾಲ್
(ಸ್ಟರ್ಲಿಂಗ್ ಥಿಯೇಟರ್ ಎದುರು)
ರೂ. 50,000 + ರೂ. 15,000 ಮಾತ್ರ ಮೈಸೂರು-8
ಕಂಠಿ ಕನ್ವೆನ್ಷನ್ ಹಾಲ್
2ನೇ ಹಂತ, ವಿಶ್ವೇಶ್ವರಯ್ಯ ನಗರ, ಮೈಸೂರು-8
ರೂ. 45,000 + ರೂ. 15,000 ಮಾತ್ರ.
98452-82558,
99804-11288, 97429-83888

ಆಂದೋಲನ
ದಿನಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

SHREE Mahalakshmi SWEETS

ಸಂಪುಟ: ೪೭, ಸಂಚಿಕೆ: ೧೪೪, ರಾಷ್ಟ್ರೀಯ ಶಕ ೧೯೩೯ ಶಿಶಿರ: ಪುಷ್ಯ ೨೪, ● ತ್ರಯೋದಶಿ- ಜ್ಯೇಷ್ಠಾ, ಭಾನುವಾರ, ಜ.೧೪, ೨೦೧೮, ದೂರವಾಣಿ: ೨೪೪೯೫೫೧, ೨೪೪೯೫೫೪, ೨೪೪೯೫೫೫, ಫ್ಯಾಕ್ಸ್: ೨೪೪೯೫೫೩, ಪುಟ : ೧೨+೪, ರೂ. ೩

# ನೋಡ ಬನ್ನಿ ಸುತ್ತೂರು ಜಾತ್ರೆ

## ಸಾಂಸ್ಕೃತಿಕ ಮೇಳ, ಮಾಹಿತಿ ಕೇಂದ್ರ, ರಂಗೋಲಿ-ಸೋಬಾನೆ ಪದ ಸ್ಪರ್ಧೆಗೆ ಚಾಲನೆ



ನಂಜನಗೂಡು ತಾಲ್ಲೂಕು ಸುತ್ತೂರು ಗ್ರಾಮದಲ್ಲಿ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವಕ್ಕೆ ಗಣ್ಯರು ಚಾಲನೆ ನೀಡಿದರು. ಶ್ರೀ ಬಸವ ಮರುಳಸಿದ್ದ ಸ್ವಾಮೀಜಿ, ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರೀ ಜಯರಾಜೇಂದ್ರ ಸ್ವಾಮೀಜಿ, ಮಲ್ಲಿಗೆ ವೀರೇಶ್, ಎಸ್.ಸುರೇಶ್ ಕುಮಾರ್, ಡಾ.ಶಿವರಾಜ್ ಕುಮಾರ್, ಬಿ.ಎಸ್.ಪಾಟೀಲ್, ಎಸ್.ಎ.ಚಿನ್ನೇಗೌಡ, ಎಸ್.ಪಿ.ಮಂಜುನಾಥ್ ಮತ್ತಿತರರು ಚಿತ್ರದಲ್ಲಿದ್ದಾರೆ.

ಸುತ್ತೂರು(ನಂಜನಗೂಡು ತಾ.),ಜ.೧೩- ಜುಳುಜುಳು ನಾದದೊಂದಿಗೆ ಪ್ರಶಾಂತವಾಗಿ ಹರಿಯುತ್ತಿರುವ ಕಪಿಲಾ ನದಿ ಮೈಮೇಲೆ ಅಲ್ಲಲ್ಲಿ ಸುತ್ತೂರು ಜಾತ್ರೆ ಎಂಬ ಬಣ್ಣದ ಬರೆಹ ಹೊತ್ತು ಗಗನದತ್ತ ತಲೆಚಾಚಿ ತೂಗುಯ್ಯಾಲೆಯಾಡುತ್ತಿರುವ ಬೃಹತ್ ಗಾತ್ರದ ಬಿಳಿ ಮತ್ತು ಹಳದಿ ಬಣ್ಣದ ಎರಡು ಬಲೂನುಗಳು. ಅದರ ತಟದಲ್ಲಿ 'ಮಾನವನಿಗೆ ಅಳಿವುಂಟು ಮಾನವೀಯತೆಗಲ್ಲ' ಎಂಬಂತೆ ಜಾತಿ, ಮತ, ಧರ್ಮಗಳ ಹಂಗು ಇಲ್ಲದ ಜನರು ಪರಂಪರೆ, ಸಂಸ್ಕೃತಿಯ ಸಂದೇಶವನ್ನು ಹೊತ್ತು ಅಲ್ಲಿ ಸಂಗಮಿಸಿದ್ದರು.

- ೫ ಕಡೆ ಊಟದ ವ್ಯವಸ್ಥೆ, ಸಾರ್ವಜನಿಕರಿಗೆ ಗದ್ದಿಗೆ ಪಕ್ಕ ಮಹಾದಾಸೋಹ
- ಮಠದ ಗದ್ದುಗೆ ಆವರಣದಲ್ಲಿ ರಾಶಿ ರಾಶಿಯಾಗಿ ಬಂದಿಳಿದಿರುವ ತರಕಾರಿ
- ಕಪಿಲ ಅತಿಥಿ ಗೃಹದಲ್ಲಿ ಸಾವಿರಾರು ಮಂದಿಗೆ ವಸತಿ ಸೌಲಭ್ಯ
- ರೈತರಿಗೆ ಮಾಹಿತಿ ನೀಡುತ್ತಿರುವ ಕೃಷಿ ಮೇಳ

ಇಂತಹ ಅಪರೂಪದ, ಸುಂದರ, ಸೃಜನಶೀಲ ಪರಿಸರದಲ್ಲಿ ಶನಿವಾರ ಸಂಪ್ರದಾಯ, ಶಿಕ್ಷಣ, ಜಾನಪದ, ದೇಸಿ ಸಂಸ್ಕೃತಿಯ ಪ್ರತಿಬಿಂಬವಾಗಿ ಸುತ್ತೂರು ಕ್ಷೇತ್ರದಲ್ಲಿ ಶ್ರೀ ಶಿವರಾತ್ರೀಶ್ವರ ಶಿವಯೋಗಿ ಸ್ವಾಮೀಜಿ ಅವರ ಜಾತ್ರಾ ಮಹೋತ್ಸವ ಆರಂಭವಾಯಿತು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ನೇತೃತ್ವದಲ್ಲಿ ೬ ದಿನಗಳ ಕಾಲ ನಡೆಯಲಿರುವ ಜಾತ್ರೆಯಲ್ಲಿ ಧರ್ಮ, ಸಂಸ್ಕೃತಿ, ಕೃಷಿ, ದೇಸಿ ಕ್ರೀಡೆಗಳು, ಜಾನಪದ ಕಲೆಗಳು, ವಿಜ್ಞಾನ, ವೈಜ್ಞಾನಿಕತೆ, ಆಧುನಿಕತೆಯಲ್ಲೂ ನಂಬಿಕೆಗಳನ್ನು ಗಟ್ಟಿಗೊಳಿಸಿಕೊಳ್ಳುವ ದೃಢಚಿತ್ತವನ್ನು ಪೋಷಿಸುವ ವೈವಿಧ್ಯಮಯ ಕಾರ್ಯಕ್ರಮಗಳು ಜನಮಾನಸವನ್ನು ಚೈತನ್ಯದ ಚಿಲುಮೆಯಾಗಿಸುವಲ್ಲಿ ಪೈಪೋಟಿ ನಡೆಸಿವೆ. ಇದು ಮೊದಲ ದಿನವೇ ಎಲ್ಲರ ಗಮನಕ್ಕೆ ಬಂದಿದೆ.

ರಾಜ್ಯದ ವಿವಿಧೆಡೆಯಿಂದ ಜಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಅತ್ಯಂತ ಸಂಭ್ರಮ, ಸಂತೋಷದಿಂದ ಧಾವಿಸಿದ್ದಾರೆ. ಇನ್ನೂ ಬರುವ ನಿರೀಕ್ಷೆಯೂ ಇದೆ. ಲಕ್ಷಾಂತರ ಜನರ ಅಂತರಾಳಕ್ಕೆ ಜಾತ್ರೆ ಲಗ್ಗೆ ಇಟ್ಟಿದೆ ಎಂದರೆ ಉತ್ಪ್ರೇಕ್ಷೆಯಾಗದು.

ಸುತ್ತೂರು ಮಠದ ಗದ್ದುಗೆ ಬಳಿ ಅಳವಡಿಸಿರುವ ವಿಶಾಲವಾದ ವೇದಿಕೆಯಲ್ಲಿ ಸುತ್ತೂರು ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆತಿದೆ. ಜಾತ್ರೆಯ ಅಂಗವಾಗಿ ಸಾಂಸ್ಕೃತಿಕ ಮೇಳ, ಮಾಹಿತಿ ಕೇಂದ್ರ, ರಂಗೋಲಿ ಮತ್ತು ಸೋಬಾನೆ ಪದ ಸ್ಪರ್ಧೆಯನ್ನು ಉದ್ಘಾಟಿಸಲಾಯಿತು.

⏭ ೧೦



ಸುತ್ತೂರು ಜಾತ್ರಾ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ವಿವಿಧ ಪ್ರದೇಶಗಳಿಂದ ಆಗಮಿಸಿದ್ದ ಜನ ಸಮೂಹವನ್ನು ಕಾಣಬಹುದು.



ತಮ್ಮ ಟಗರು ಚಿತ್ರದ ಹಾಡಿಗೆ ನೃತ್ಯ ಮಾಡಿದ ನಟ ಶಿವರಾಜ್‌ಕುಮಾರ್

**ಸಂಕ್ರಾಂತಿ ದಿನ ವಿಶೇಷ ಅಡುಗೆ:** ಸೋಮವಾರ ಸಂಕ್ರಾಂತಿ ಹಬ್ಬ ಇರುವ ಹಿನ್ನೆಲೆಯಲ್ಲಿ ವಿಶೇಷ ಅಡುಗೆ ತಯಾರಿಸಲಾಗುವುದು. ಲಾಡು, ಕಿಚಡಿ, ಪಾಯಸ, ಕುಂಬಳಕಾಯಿ ಅಲಸಂದೆ ಹುಳಿಯನ್ನು ಮಾಮೂಲು ಅನ್ನಸಾಂಬಾರ್ ಜೊತೆ ಜನರಿಗೆ ಬಡಿಸಲು ನಡೆದಿದೆ ಸಿದ್ಧತೆ




## ಈ ಬಗ್ಗೆ ರಾಜ್ಯ ನಾಯಕರಿಗೆ ಸೂಚನೆ ನೀಡಿದ ಕಾಂಗ್ರೆಸ್ ಹೈಕಮಾಂಡ್

ಬೆಂಗಳೂರು,ಜ.೧೩- ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರನ್ನೇ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಅನೌಪಚಾರಿಕವಾಗಿ ಬಿಂಬಿಸುವುದಾಗಿ ಕಾಂಗ್ರೆಸ್ ಹೈಕಮಾಂಡ್ ರಾಜ್ಯದ ಪ್ರಮುಖ ನಾಯಕರಿಗೆ ಮುನ್ಸೂಚನೆ ನೀಡಿದೆ.

ದೇವರಾಜ ಅರಸು ನಂತರ ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿಯಾಗಿ ಐದು ವರ್ಷ ಆಡಳಿತಾವಧಿ ಪೂರೈಸಿ ಯಶಸ್ಸಿನತ್ತ ದಾಪುಗಾಲು ಹಾಕಿರುವ ಸಿದ್ದರಾಮಯ್ಯ ಅವರು ಕರ್ನಾಟಕದ ಕಾಂಗ್ರೆಸ್ ಮಟ್ಟಿಗೆ ಅತ್ಯಂತ ಪ್ರಭಾವಿ ನಾಯಕರಾಗಿ ಹೊರಹೊಮ್ಮಿದ್ದಾರೆ.

ಇತ್ತೀಚೆಗೆ ಒಂದು ತಿಂಗಳ ಕಾಲ ನಿರಂತರವಾಗಿ ರಾಜ್ಯಾದ್ಯಂತ ೧೨೦ ಕ್ಷೇತ್ರಗಳಲ್ಲಿ ಸಾಧನಾ ಸಮಾವೇಶ ನಡೆಸಿರುವ ಸಿದ್ದರಾಮಯ್ಯ ಅವರಿಗೆ ಜನರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಇದರ ಬಗ್ಗೆ ರಹಸ್ಯ ಮಾಹಿತಿ ಪಡೆದಿರುವ ಹೈಕಮಾಂಡ್ ಖುಷಿಯಾಗಿದ್ದು, ಸಿದ್ದರಾಮಯ್ಯ ಅವರ ನಾಯಕತ್ವ ಪ್ರಶ್ನಾತೀತವಾಗಿದೆ. ಮುಂದಿನ ಅವಧಿಗೂ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಿದರೆ ರಾಷ್ಟ್ರ ಕಾಂಗ್ರೆಸ್‌ಗೆ ಒಂದಷ್ಟು ಚೈತನ್ಯ ತುಂಬಲು ಸಾಧ್ಯವಾಗುತ್ತದೆ ಎಂಬ ಲೆಕ್ಕಾಚಾರ ಹಾಕಿದ್ದಾರೆ ಎನ್ನಲಾಗಿದೆ.

**ಫೆಬ್ರವರಿಯಲ್ಲಿ ರಾಹುಲ್ ಪ್ರವಾಸ**

ಫೆ. ೧೦, ೧೧, ೧೨ರಂದು ರಾಹುಲ್ ಗಾಂಧಿ ರಾಜ್ಯ ಪ್ರವಾಸ ಮಾಡಲಿದ್ದಾರೆ. ಮೊದಲ ಹಂತದಲ್ಲಿ ಬೆಂಗಳೂರು ವಿಭಾಗದಲ್ಲಿ ಪ್ರವಾಸ. ನಂತರ ರಾಜ್ಯಾದ್ಯಂತ ಬಸ್‌ನಲ್ಲಿ ತೆರಳಲಿದ್ದಾರೆ.

⏭ ៦

# ತಮಿಳು ನಾಡಿಗೆ ನೀರು ಬಿಡದಿರಲು ನಿರ್ಧಾರ

ಹೊಸದಿಲ್ಲಿ, ಜ.೧೩-ಕರ್ನಾಟಕದ ಜನತೆಗೆ ಕುಡಿಯಲು ಸಾಕಷ್ಟು ನೀರಿಲ್ಲದೆ ನೀರಿನ ಅಭಾವ ಎದುರಾಗಿದೆ. ಈ ಸಂದರ್ಭದಲ್ಲಿ ನೆರೆ ರಾಜ್ಯಗಳಿಗೆ ಕಾವೇರಿ ನೀರು ಬಿಡುಗಡೆ ಮಾಡಲಾಗದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.



ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿ ಅವರ ಭೇಟಿಗೆ ಆಗಮಿಸಿದ್ದ ಅವರು. ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕಾವೇರಿ ನೀರು ಬಿಡುವಂತೆ ತಮಿಳುನಾಡು ಪತ್ರ ಬರೆದಿರುವ ಹಿನ್ನೆಲೆಯಲ್ಲಿ ದಿಲ್ಲಿಯಲ್ಲಿ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಮುಂದಿನ ತಿಂಗಳು ಕಾವೇರಿ ತೀರ್ಪು ಬರಲಿದ್ದು, ನಮ್ಮ ಪರ ತೀರ್ಪು ಬರುವ ನಿರೀಕ್ಷೆ ಇದೆ ಎಂದರು

ಈ ಮಧ್ಯೆ ಮಹಾದಾಯಿ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಮಾತನಾಡಿದ ಸಿದ್ದರಾಮಯ್ಯ, ಶೀಘ್ರವೇ ಸರ್ವಪಕ್ಷಗಳ ಸಭೆ ಕರೆಯುವೆ. ಸಭೆಯಲ್ಲಿ ಎಲ್ಲರೊಂದಿಗೆ ಚರ್ಚೆ ಮಾಡಿ ಮುಂದಿನ ತೀರ್ಮಾನ ತೆಗೆದುಕೊಳ್ಳುವುದಾಗಿ ಹೇಳಿದರು.

# ತಾಂಡ್ಯದಲ್ಲಿ ಮಹಿಳಾ ಉದ್ಯಮ ಪಾರ್ಕ್

**೪೮.೦೩ ಎಕರೆ ಪ್ರದೇಶದಲ್ಲಿ ಅಭಿವೃದ್ಧಿ; ಕೈಗಾರಿಕೆಗೆ ೩೫೨ ಎಕರೆ ಪ್ರದೇಶ ಭೂ ಸ್ವಾಧೀನಕ್ಕೆ ಸಿದ್ಧತೆ: ದೇಶಪಾಂಡೆ**

ಮೈಸೂರು,ಜ.೧೩-ಮೈಸೂರಿನ ಹೊರ ವಲಯದ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ ೪೮.೦೩ ಎಕರೆ ಪ್ರದೇಶದಲ್ಲಿ ಮಹಿಳಾ ಉದ್ಯಮ ಪಾರ್ಕ್ ಸ್ಥಾಪನೆ ಮಾಡಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಆರ್.ವಿ.ದೇಶಪಾಂಡೆ ಅವರು ತಿಳಿಸಿದರು.



ನಗರದ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಕೈಗಾರಿಕಾ ಅಭಿವೃದ್ಧಿಗೆ ಒತ್ತು ನೀಡಿದ್ದು, ಮಹಿಳೆಯರು ಉದ್ಯಮ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಅನುವಾಗುವಂತೆ ಯೋಜನೆಗಳನ್ನು ರೂಪಿಸಿದೆ ಎಂದರು.

ಕನಕಪುರ ಹಾರೋಹಳ್ಳಿಯಲ್ಲಿ ೧೦೦ ಎಕರೆ, ಬಳ್ಳಾರಿ ಜಿಲ್ಲೆಯ ಕುಡಿದಿನಿ ಕೈಗಾರಿಕಾ ಪ್ರದೇಶದಲ್ಲಿ ೬೦ ಎಕರೆ, ಧಾರವಾಡದಲ್ಲಿ ೩೦ ಎಕರೆ, ಕಲಬುರಗಿಯಲ್ಲಿ ೫೦.೭೦ ಎಕರೆ, ಮಂಗಳೂರಿನಲ್ಲಿ ೪೦ ಎಕರೆ ಪ್ರದೇಶದಲ್ಲಿ ಮಹಿಳಾ ಉದ್ಯಮ ಪಾರ್ಕ್‌ಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಹೇಳಿದರು.

ಮೈಸೂರಿನಲ್ಲಿ ೧೨ ಕೈಗಾರಿಕಾ ಪ್ರದೇಶಗಳಿದ್ದು, ೫೯೭೬ ಎಕರೆಯಲ್ಲಿ ವ್ಯಾಪಿಸಿದೆ.

⏭ ៦

# ಯುಜಿಸಿ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ

ಬೆಂಗಳೂರು,ಜ.೧೩- ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ನೀಡುವಂತೆ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಮಾನ್ಯತೆ ನೀಡುವಂತೆ ರಾಜ್ಯ ಉಚ್ಚ ನ್ಯಾಯಾಲಯ ಆದೇಶಿಸಿದ್ದರೂ ಅದನ್ನು ಉಲ್ಲಂಘಿಸಿದ ಯುಜಿಸಿ ವಿರುದ್ಧ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಿದೆ.

೨೦೧೭-೧೮ನೇ ಸಾಲಿಗೆ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಲು ಅನುಮತಿ ಕೋರಿ ಕೆಎಸ್‌ಒಯು ನಿಂದ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಲಾಗಿತ್ತು. ಅರ್ಜಿ ವಿಚಾರಣೆ ನಡೆಸಿದ ನ್ಯಾಯ ಪೀಠ, ೨ ವಾರದೊಳಗೆ ಅನುಮತಿ ನೀಡುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ ನಿರ್ದೇಶಿಸಿ ಅರ್ಜಿ ಇತ್ಯರ್ಥಪಡಿಸಿತ್ತು.

ನ್ಯಾಯಾಲಯದ ಆದೇಶವನ್ನು ಗಂಭೀರವಾಗಿ ತೆಗೆದುಕೊಳ್ಳದ ಯುಜಿಸಿ ಅಧಿಕಾರಿಗಳು, ಕೆಎಸ್‌ಒಯು ಮಾನ್ಯತೆ ನವೀಕರಣ ಮಾಡಿಲ್ಲ. ನ್ಯಾಯಾಲಯದ ಆದೇಶವನ್ನೇ ಮುಂದಿಟ್ಟುಕೊಂಡು ಕೆಎಸ್‌ಒಯು ಕುಲಪತಿಯವರು ದಿಲ್ಲಿಗೆ ಹೋಗಿ ಯುಜಿಸಿ ಅಧಿಕಾರಿಗಳನ್ನು ಭೇಟಿ ಮಾಡಿ, ಮಾತುಕತೆ ನಡೆಸಿದ್ದರು. ಆದರೂ ಯುಜಿಸಿಯಿಂದ ಮಾನ್ಯತೆ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಿದ್ದಾರೆ.

# ನ್ಯಾ.ದಿನೇಶ್ ಮಹೇಶ್ವರಿ ಕರ್ನಾಟಕದ ಸಿಜೆ

ಬೆಂಗಳೂರು,ಜ.೧೩- ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಮೇಘಾಲಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ದಿನೇಶ್ ಮಹೇಶ್ವರಿ ನೇಮಕಗೊಂಡಿದ್ದಾರೆ.



೨೦೧೭ರ ಅ.೧೦ರಂದು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಎಸ್.ಕೆ. ಮುಖರ್ಜಿ ನಿವೃತ್ತಿ ಹೊಂದಿದ್ದು, ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯಮೂರ್ತಿ ಎಚ್.ಜಿ.ರಮೇಶ್ ಹಂಗಾಮಿ ಸಿಜೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

೩ ತಿಂಗಳಿಂದ ಖಾಲಿ ಇದ್ದ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಸ್ಥಾನಕ್ಕೆ ಕಡೆಗೂ ಹೊಸ ಸಿಜೆಯನ್ನು ನೇಮಕ ಮಾಡಲಾಗಿದೆ.

⏭ ៦

## ಯುವರಾಜದಲ್ಲಿ ೬೧ ಮಂದಿ ತಾತ್ಕಾಲಿಕ ನೌಕರರ ವಜಾ



ಮೈಸೂರು,ಜ.೧೩-ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ವಿಶ್ವವಿದ್ಯಾನಿಲಯದ ಸಾಮರ್ಥ್ಯವರ್ಧಿತ ಉತ್ಕೃಷ್ಟ ಜ್ಞಾನ ಸ್ವಾಯತ್ತತಾ ಕಾಲೇಜು ಪ್ರತಿಷ್ಠಿತ ಯುವರಾಜ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ತಾತ್ಕಾಲಿಕ ೬೧ ನೌಕರರನ್ನು ಸೇವೆಯಿಂದ ವಜಾ ಮಾಡಲಾಗಿದೆ.

⏭ ៦

# ೨೩ಕ್ಕೆ ವಿಶ್ವ ಲಿಂಗಾಯತ ಮಹಾಸಭಾ ಉದಯ

## ನಿರ್ಣಾಯಕ ಹಂತದತ್ತ ವೀರಶೈವ-ಲಿಂಗಾಯತ ವಿವಾದ; ಜ.೨೩ರಂದೇ ಮಹತ್ವದ ಸಭೆ

ಬೆಂಗಳೂರು,ಜ.೧೩- ವೀರಶೈವ-ಲಿಂಗಾಯತ ಕದನ ಇದೀಗ ನಿರ್ಣಾಯಕ ಹಂತಕ್ಕೆ ತಲುಪಿದ್ದು, ಜ.೨೩ ರಂದು ವಿಶ್ವ ಲಿಂಗಾಯತ ಮಹಾಸಭಾ ಅಧಿಕೃತವಾಗಿ ಆರಂಭವಾಗಲಿದೆ.

ಸುದ್ದಿಗೋಷ್ಠಿಯಲ್ಲಿ, ಶನಿವಾರ ಮಾತನಾಡಿದ ಲಿಂಗಾಯತ ಪ್ರತ್ಯೇಕ ಧರ್ಮ ಹೋರಾಟದ ಸಂಚಾಲಕ, ನಿವೃತ್ತ ಐಎಎಸ್ ಅಧಿಕಾರಿ ಎಸ್.ಎಂ.ಜಾಮದಾರ್, ಜಯರಾಂ ಮತ್ತಿತರರು ಈ ವಿಷಯ ತಿಳಿಸಿದರಲ್ಲದೆ ಅಂದು ಪ್ರಗತಿಪರರು, ಹಲ ಮಠಾಧೀಶರು, ಚಿಂತಕರ ಜತೆ ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಮಹತ್ವದ ಸಭೆ ನಡೆಯಲಿದ್ದು, ಅಂದಿನಿಂದಲೇ ವಿಶ್ವ ಲಿಂಗಾಯತ ಮಹಾಸಭಾ ಆರಂಭವಾಗಲಿದೆ ಎಂದರು.

ಬಸವಣ್ಣನೇ ಲಿಂಗಾಯತ ಧರ್ಮದ ಮೂಲ ಪುರುಷ. ಶರಣರು ರಚಿಸಿರುವ ವಚನಗಳೇ ನಮ್ಮ ಸಿದ್ಧಾಂತ. ಈಗ ಅನುಸರಿಸಲಾಗುತ್ತಿರುವ ಸಿದ್ಧಾಂತ ಶಿಖಾಮಣಿಯಲ್ಲ ಎಂಬುದು ಸೇರಿದಂತೆ ಮೂರು ಸೂತ್ರಗಳನ್ನು ವೀರಶೈವ ಮಹಾಸಭಾ ಮುಂದಿಟ್ಟಿದ್ದೆವು. ಆದರೆ ಅವರು ಒಪ್ಪಲಿಲ್ಲ.

- ವಿಶ್ವ ಲಿಂಗಾಯತ ಮಹಾಸಭಾಗೆ ಅಧಿಕೃತ ಬೈಲಾ ಸಿದ್ಧ
- ಬಸವ ಸಹಿತ ಲಾಂಛನಕ್ಕೆ ಅಸ್ತು
- ಯುವ ವೇದಿಕೆಯಾಗಿ ಪರಿವರ್ತನೆಯಾಗಲಿರುವ ಬಸವ ಸೇವಾದಳ
- ಮಹಿಳಾ ಘಟಕಗಳಿಂದ ಹಿಡಿದು ವಿವಿಧ ಘಟಕಗಳಿಗೆ ಪ್ರತ್ಯೇಕ ಅಸ್ತಿತ್ವ



ವೀರಶೈವ ಮಹಾಸಭಾದಿಂದ ದೂರವಾಗುತ್ತಿರುವುದು ನಮಗೆ ನೋವು ತಂದಿದೆ. ಆದರೂ ಇದು ಅನಿವಾರ್ಯ. ಹೀಗಾಗಿ ವಿಶ್ವ ಲಿಂಗಾಯತ ಮಹಾಸಭಾ ತಲೆ ಎತ್ತಲಿದೆ.
–ಎಸ್.ಎಂ. ಜಾಮದಾರ್ ಮತ್ತು ಜಯರಾಂ

ಹೀಗಾಗಿ ಅವರಿಂದ ದೂರವಾಗುತ್ತಿರುವುದು ನಮಗೆ ನೋವು ತಂದಿದೆ. ಆದರೂ ಇದು ಅನಿವಾರ್ಯ.ಹೀಗಾಗಿ ವಿಶ್ವ ಲಿಂಗಾಯತ ಮಹಾಸಭಾ ತಲೆ ಎತ್ತಲಿದೆ ಎಂದು ಅವರು ವಿವರಿಸಿದರು.

⏭ ៦

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 402
ದೂರವಾಣಿ: 2425156

ಆಂದೋಲನ
ಅಂತರ ಜಾಲ ವಿಳಾಸ
andolana.epapertoday.com

